**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ.**

**ಎಸ್. ಸಿ. ನಂಃ 10015/2019**

**ಫಿರ್ಯಾದುದಾರರು : ದೊಡ್ಡಬಳ್ಳಾಪುರ ನಗರ ಪೋಲೀಸ್ ಠಾಣೆ**

**ವಿರುದ್ಧ**

**ಆರೋಪಿ : ಆನಂದ ಎಸ್. ಅಲಿಯಾಸ**
**ಕಬಾಬ್ ಆನಂದ್**
ತಂದೆಃ ಸತೀಶ್, ವಯಸ್ಸು 22 ವರ್ಷ,
ವಾಸಃ ದೇವರಾಜನಗರ, ಕೊಂಗಾಡಿಯಪ್ಪ
ಕಾಲೇಜು ರಸ್ತೆ, ದೊಡ್ಡಬಳ್ಳಾಪುರ ನಗರ.
ಬೆಂಗಳೂರು ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆ 313 ರಡಿ ಆರೋಪಿಯು ಹೇಳಿಕೆ**

**ಪ್ರಶ್ನೆಃ 1.** ಈ ಪ್ರಕರಣದಲ್ಲಿ ಅಭಿಯೋಜನಾ ಪರ ಸಾಕ್ಷಿದಾರರು ಮಂಡಿಸಿರುವ ಸಾಕ್ಷ್ಯವನ್ನು ನೀವು ಕೇಳಿದ್ದೀರಾ ?

**ಉತ್ತರಃ ಕೇಳಿರುತ್ತೇನೆ.**

**ಪ್ರಶ್ನೆಃ 2.** ಪ್ರಾಸಾ-1 ನಾಗರಾಜು ಅವರ ಮಗ ಮಂಜುನಾಥರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅವರ ತಂದೆ ತಾಯಿಗೆ ಅವರು ಒಟ್ಟು 4 ಜನ ಮಕ್ಕಳಿದ್ದು, ಮೊದಲನೆಯವರು ವೇದಾವತಿ, 2 ನೇಯವನು ನಾನು ಮಂಜುನಾಥ, 3ನೇಯವರು ನನ್ನ ತಂಗಿ ಲತಾ, 4ನೇಯವನು ನನ್ನ ತಮ್ಮ ಗಂಗಾಧರ ಇರುತ್ತೇವೆಂದು, ದಿನಾಂಕಃ 07.01.2019 ರಂದು ರಾತ್ರಿ ಅವರ ತಮ್ಮ ಗಂಗಾಧರನನ್ನು ಹತ್ಯೆ ಮಾಡಲಾಗಿದ್ದು, ಆ ದಿನ ರಾತ್ರಿ ಸುಮಾರು 10.100 ಗಂಟೆಗೆ ಚಾಸಾ 2 ಪವನ್‌ಕುಮಾರ್ ಅವರ ಮನೆಯ ಬಳಿ

ಗಾಬರಿಯಿಂದ ಓಡಿ ಬಂದು ಆತ ಮತ್ತು ಅವರ ತಮ್ಮ ಕೊರಚರಹಟ್ಟಿಯಲ್ಲಿರುವ ಪ್ರೀತಿ ವೈನ್ಸ್ ಬಳಿ ನಿಂತು ಮಾತನಾಡುತ್ತಿದ್ದಾಗ ಆರೋಪಿಯಾದ ನೀನು ಅಂದರೆ ಆನಂದ ಅಲಿಯಾಸ ಕಬಾಬ್ ಮತ್ತು ನಿನ್ನ ಸಹಚರರಾದ ಲೋಕಿ ಮತ್ತು ಸ್ವಾಮಿ ಮೂರು ಜನ ಡಿಯೋ ಬೈಕಿನಲ್ಲಿ ಬಂದು ಅವರೊಂದಿಗೆ ಏಕಾಏಕಿ ಜಗಳ ತೆಗೆದು ಕಣ್ಣಿಗೆ ಕಾರದಪುಡಿ ಎರಚಿ ಮಚ್ಚಿನಿಂದ ನನ್ನ ತಮ್ಮನ ತಲೆಗೆ, ಕಣ್ಣಿನ ಬಳಿ, ಕಿವಿ ಭಾಗ, ಬಾಯಿ, ಎಡಕೆನ್ನೆ, ಎಡಗೈ ತೋಳಿನ ಮೇಲೆ ಹಲ್ಲೆ ಮಾಡಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ ಸುಳ್ಳು**

**ಪ್ರಶ್ನೆಃ 3.** ಪ್ರಾಸಾ-1 ರವರು ತಮ್ಮ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ನಂತರ ಚಾಸಾ 2 ರವರ ತಲೆ ಮತ್ತು ಕೈಗೆ ಏಟಾಗಿದ್ದು ಆತನ ತುಟಿಯಿಂದ ರಕ್ತ ಬರುತ್ತಿತ್ತು ಎಂದು, ಆತನ ಜೊತೆ ತಾನು ಕೃತ್ಯ ನಡೆದ ಸ್ಥಳಕ್ಕೆ ಹೋದಾಗ ರಕ್ತಗಾಯಗಳಾಗಿದ್ದ ಅವರ ತಮ್ಮ ಅಲ್ಲೇ ಬಿದ್ದಿದ್ದನೆಂದು, ಅವರು ಕೂಡಲೇ ಆಟೋ ತೆಗೆದುಕೊಂಡು ಹೋಗಿ ಚಾಸಾ 2 ಮತ್ತು ಸ್ಥಳೀಯರ ಸಹಾಯದಿಂದ ದೊಡ್ಡಬಳ್ಳಾಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆಂದು, ಆತನನ್ನು ವೈದ್ಯರು ಪರೀಕ್ಷಿಸಿ ಉಪಚರಿಸಿದರೆಂದು, ಆದರೆ ಚಿಕಿತ್ಸೆ ಫಲಕಾರಿಯಾಗದೇ 10 ನಿಮಿಷಗಳ ನಂತರ ಆತ ತೀರಿಕೊಂಡಿದ್ದಾನೆಂಬ ವಿಚಾರವನ್ನು ಅವರಿಗೆ ವೈದ್ಯರು ತಿಳಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ ಸುಳ್ಳು**

**ಪ್ರಶ್ನೆಃ 4.** ಪ್ರಾಸಾ-1 ರವರು ತಮ್ಮ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ಮರುದಿನ ಅವರು ಪೋಲೀಸು ಠಾಣೆಗೆ ಹೋಗಿ ನಿಪಿ-1 ರಂತೆ ದೂರನ್ನು ದಾಖಲು ಮಾಡಿರುತ್ತಾರೆಂದು, ದೂರು ದಾಖಲು ಮಾಡಿಕೊಂಡ ನಂತರ ಪೋಲೀಸರು ಕೃತ್ಯ ನಡೆದ ಸ್ಥಳಕ್ಕೆ ಬಂದು ನಿಪಿ-2 ರಂತೆ ಮಹಜರ್ ಕ್ರಮ ಜರುಗಿಸಿ ರಕ್ತಮಿಶ್ರಿತ ಮಣ್ಣು, ರಕ್ತಮಿಶ್ರಿತ ಜಲ್ಲಿ ಕಲ್ಲುಗಳು ಹಾಗೂ ಸ್ಯಾಂಪಲ್ ಮಣ್ಣು ಇವುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆಂದು, ಆ ಸಮಯದಲ್ಲಿ ನಿಪಿ-3 ಮತ್ತು ನಿಪಿ-4 ರಂತೆ ಪೋಟೋಗಳನ್ನೂ ಸಹ ತೆಗೆದಿರುತ್ತಾರೆಂದು ಮತ್ತು ನಿಪಿ-4 ರ ಪೋಟೋದಲ್ಲಿ ಶೆಟ್ಟರ ಮತ್ತು ಗೋಡೆಯ ಮೇಲೆ

ಅವರ ತಮ್ಮನ ರಕ್ತದ ಕಲೆಗಳು ಗೊಡೆಯ ಮೇಲೆ ಬಿದ್ದಿರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ ಸುಳ್ಳು**

**ಪ್ರಶ್ನೆಃ 5.** ಪ್ರಾಸಾ-1 ರವರು ತಮ್ಮ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ನಂತರ ತಮ್ಮ ಚಿಕ್ಕಪ್ಪನ ಮಕ್ಕಳ ಮೇಲೆ 2017 ರಲ್ಲಿ ಸುನೀಲ ಎಂಬಾತ ಗಲಾಟೆ ಮಾಡಿದ್ದ ಎಂಬ ಕಾರಣಕ್ಕೆ ಅವರ ತಮ್ಮ ಮತ್ತು ಸುನೀಲ ಮದ್ಯೆ ಗಲಾಟೆಯಾಗಿ ಚಾಕುವಿನಿಂದ ಚುಚ್ಚಿದ್ದಾನೆ ಎಂಬ ಆಪಾದನೆ ಮೇಲೆ ಅವರ ತಮ್ಮನನ್ನು ಪೋಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದರೆಂದು, ಜೈಲಿನಿಂದ ಬಿಡುಗಡೆಯಾದ ಮೇಲೆ ಆತ ಮನೆಗೆ ಬಂದು ಬಿಸಲೇರಿ ನೀರು ಕ್ಯಾನುಗಳನ್ನು ಸರಬರಾಜು ಮಾಡಿಕೊಂಡಿದ್ದನೆಂದು, ಅವರ ತಮ್ಮ, ಚಾಸಾ 2 ಮತ್ತು ಈ ಮೇಲಿನ ವ್ಯಕ್ತಿಗಳೆಲ್ಲಾ ಮೊದಲು ಸ್ನೇಹಿತರಾಗಿದ್ದು ಜೊತೆಯಲ್ಲೇ ಓಡಾಡಿಕೊಂಡಿದ್ದು, ಯಾವುದೇ ಹಳೆಯ ದ್ವೇಷದಿಂದ ಅವರು ಸೇರಿಕೊಂಡು ಅವರ ತಮ್ಮನನ್ನು ಕೊಲೆ ಮಾಡಿರುತ್ತಾರೆಂದು, ಅವರ ತಮ್ಮ ಹಾಗೂ ಆತನ ಮೇಲೆ ಹಲ್ಲೆ ಮಾಡಿದ ವ್ಯಕ್ತಿಗಳ ಮದ್ಯೆ ಹಣಕಾಸಿನ ವಿಚಾರದಲ್ಲಿ ವೈಷಮ್ಯ ಇತ್ತು ಎಂದು ಚಾಸಾ 2 ಪವನ ತಿಳಿಸಿದ್ದನೆಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ ಸುಳ್ಳು**

**ಪ್ರಶ್ನೆಃ 6.** ಪ್ರಾಸಾ-2 ಸುಬ್ರಮಣ್ಯ ಅವರ ಮಗ ಬಾಲಕೃಷ್ಣ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ 2019 ನೇ ಜನವರಿಯಲ್ಲಿ ಕೊಂಗಾಡಿಯಪ್ಪ ಕಾಲೇಜು ಬಳಿ ಇರುವ ಪ್ರೀತಿ ವೈನ್ಸ್ ಸರ್ಕಲ್ ಬಳಿ ಪೋಲೀಸರು ಗಂಗಾಧರ್‌ರವರ ಕೊಲೆ ವಿಚಾರ ವಾಗಿ ಬೆಳಗ್ಗೆ 9.00 ರಿಂದ 10.00 ಗಂಟೆಯವರೆಗೂ ನಿಪಿ-2 ರಂತೆ ಮಹಜರ್ ಮಾಡಿರುತ್ತಾರೆಂದು, ಆ ಜಾಗವನ್ನು ಪೋಲೀಸರಿಗೆ ಚಾಸಾ1 ರವರು ತೋರಿಸಿರುತ್ತಾರೆಂದು, ಘಟನಾ ಸ್ಥಳದದಿಂದ ಪೋಲೀಸರು ಜಲ್ಲಿ ಕಲ್ಲುಗಳು ಮತ್ತು ಮಣ್ಣು ಹಾಗೂ ಸ್ಯಾಂಪಲ್ ಮಣ್ಣನ್ನು ಆ ಸಮಯ ತೆಗೆದುಕೊಂಡಿದ್ದು ಅವುಗಳನ್ನು ಪ್ಲಾಸ್ಟಿಕ್ ಡಬ್ಬಗಳಿಗೆ ಹಾಕಿ ಮೊಹರು ಮಾಡಿ ಅವುಗಳ ಮೇಲೆ ತಮ್ಮ ಸಹಿಗಳುಳ್ಳ ಚೀಟಿಗಳನ್ನು ಅಂಟಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ ಸುಳ್ಳು**

**ಪ್ರಶ್ನೆಃ 7.** ಪ್ರಾಸಾ-3 ಪಿಳ್ಳಪ್ಪ ಅವರ ಮಗ ಮಂಜುನಾಥ ಕೆ.ಪಿ. ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 08.01.2019 ರಂದು ದೊಡ್ಡಬಳ್ಳಾಪುರ ಗ್ರಾಮಾಂತರ ಪೋಲೀಸು ಠಾಣೆಗೆ ಗಂಗಾಧರ್ ರವರ ಕೊಲೆಯ ವಿಚಾರದಲ್ಲಿ ಅವರನ್ನು ಕರೆಸಿದ್ದರೆಂದು, ಮೃತನ ರಕ್ತ ತಾಗಿದ ಬಟ್ಟೆಗಳು ಮತ್ತು ಕಾರದಪುಡಿ ಇವುಗಳನ್ನು ಅಮಾನತ್ತು ಪಡಿಸಿಕೊಂಡು ಸಂಜೆ 5.00 ರಿಂದ 6.00 ಗಂಟೆಯವರೆಗೆ ಬರೆದ ನಿಪಿ-19 ರ ಮಹಜರಿಗೆ ಅವರು ಸಹಿ ಮಾಡಿರುತ್ತಾರೆಂದು, ಹಾಗೂ ಮು.ಮಾ 3 ರಿಂದ 6 ರ ಬಟ್ಟೆಗಳು ಮತ್ತು ಮು.ಮಾ 7 ರ ಕಾರದ ಪುಡಿ ಪೊಟ್ಟಣವನ್ನು ನೋಡಿದರೆ ಗುರುತಿಸಿರುತ್ತಾರೆಂದು, ಇವುಗಳ ಮೇಲೆ ಅಂಟಿಸಿರುವ ಬಿಳಿ ಚೀಟಿಗಳ ಮೇಲೆ ತನ್ನ ಸಹಿಗಳು ಇರುತ್ತವೆಂದು, ಸದರಿ ಮಹಜರಿಗೆ ನಾನು ಮತ್ತು ಚಾಸಾ-12 ಸಹಿಗಳನ್ನು ಮಾಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ ಸುಳ್ಳು**

**ಪ್ರಶ್ನೆಃ 8.** ಪ್ರಾಸಾ-4. ಎಂ. ಮಹೇಶ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 10.01.2019 ರಂದು ಸುಮಾರು ಮದ್ಯಾಹ್ನದ ಸಮಯದಲ್ಲಿ ದೊಡ್ಡಬಳ್ಳಾಪುರ ಗ್ರಾಮಾಂತರ ಪೋಲೀಸರು ತನ್ನನ್ನು ಠಾಣೆಗೆ ಕರೆಸಿದ್ದರೆಂದು, ಆಗ ಅವರು ಮತ್ತು ಕೃಷ್ಣಮೂರ್ತಿ ಹೋಗಿದ್ದರೆಂದು, ಅಲ್ಲಿ ಆರೋಪಿಯಾದ ನೀನು ಇದ್ದೆಯೆಂದು, ಸದರಿ ಆರೋಪಿಯಾದ ನೀನು ಬಟ್ಟೆಯನ್ನು ಹಾಜರಪಡಿಸುತ್ತೇನೆಂದು ಹೇಳಿದ್ದರಿಂದ ಅವರು ಮತ್ತು ಕೃಷ್ಣಮೂರ್ತಿ ಮತ್ತು ಪೋಲೀಸರು ಪೋಲೀಸ್ ಜೀಪಿನಲ್ಲಿ ಆರೋಪಿಯಾದ ನಿನ್ನೊಂದಿಗೆ ಡಿ ಕ್ರಾಸ್‌ನ ಮುಂಭಾಗದ ಅರ್ಕಾವತಿ ಕೆರೆಗೆ ಕರೆದುಕೊಂಡು ಹೋಗಿರುತ್ತಾನೆಂದು, ಅಲ್ಲಿ ಆನಂದನು ನೀಲಗಿರಿ ಗಿಡದ ಹತ್ತಿರ ಇಟ್ಟಿದ್ದ ಬ್ಲಾಕ್ ಕಲರ್‌ನ ಸ್ವೇಟರ್, ನೈಟ್ ಪ್ಯಾಂಟ ಮತ್ತು ಒಂದು ಮಚ್ಚನ್ನು ತೋರಿಸಿರುತ್ತಾನೆಂದು, ನಂತರ ಅಲ್ಲಿ ಪೋಲೀಸರು ಫೋಟೋ ತೆಗೆದುಕೊಂಡಿರುತ್ತಾರೆಂದು, ನಂತರ ಪೋಲೀಸರು ಅವರನ್ನು ಠಾಣೆಗೆ ವಾಪಸ್ಸು ಕರೆದುಕೊಂಡು ಬಂದು ಅಲ್ಲಿ ಸಹಿ ಪಡೆದುಕೊಂಡು ಕಳುಹಿಸಿರುತ್ತಾರೆಂದು, ಆರೋಪಿಯಾದ ನೀನು ದಾಸ ಎಂಬುವವನ್ನು ಕೊಲೆ ಮಾಡಿ ಸದರಿ ಬಟ್ಟೆಗಳನ್ನು ಮತ್ತು ಮಚ್ಚನ್ನು ಅರ್ಕಾವತಿ ಕೆರೆ ಒಳಗಡೆ ಇರುವ ನೀಲಗಿರಿ ಗಿಡದ ಪೋದೆಯಲ್ಲಿ ಇಟ್ಟಿದ್ದನೆಂದು, ಸದರಿ ಬಟ್ಟೆಗಳು ಆರೋಪಿಯಾದ ನಿನಗೆ ಸಂಬಂಧಪಟ್ಟಿರುತ್ತವೆಂದು, ಸದರಿ ಬಟ್ಟೆಗಳನ್ನು ಮತ್ತು ಮಚ್ಚನ್ನು ಪೋಲೀಸರು ತೆಗೆದುಕೊಂಡು ಕೆರೆಯ ಹತ್ತಿರ ನಿಪಿ-20 ರ ದಾಖಲೆ ಬರೆದು

ತನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ** ಸುಳ್ಳು

**ಪ್ರಶ್ನೆಃ 9.** ಪ್ರಾಸಾ-5 ಈಶ್ವರಪ್ಪನವರ ಮಗ ಮಂಜುನಾಥ ತಂದೆ ಈಶ್ವರಪ್ಪ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 09.01.2019 ರಂದು ಅವರನ್ನು ದೊಡ್ಡಬಳ್ಳಾಪುರ ಸರ್ಕಾರಿ ಆಸ್ಪತ್ರೆಯಲ್ಲಿರುವ ಗೆಳತಿ ವಿಭಾಗಕ್ಕೆ ಪೋಲೀಸರು ಪವನಕುಮಾರನ ಬಟ್ಟೆಯನ್ನು ತೆಗೆದುಕೊಳ್ಳುತ್ತಿದ್ದೇವೆ ಬನ್ನಿ ಎಂದು ತನ್ನನ್ನು ಕರೆದಿದ್ದರೆಂದು, ಪವನಕುಮಾರನ ರಕ್ತ ಆಗಿದ್ದ ಬ್ಲೂ ಕಲರ ಪ್ಯಾಂಟ್, ಹಸಿರು ಬಣ್ಣದ ಡಿಸೈನ ಇರುವ ಶರ್ಟ್ ಅನ್ನು ತೆಗೆದುಕೊಂಡು ಸೀಲು ಮಾಡಿ ಅವರ ಮತ್ತು ನವೀನನ ಸಹಿಯನ್ನು ಪಡೆದುಕೊಂಡಿರುತ್ತಾರೆಂದು, ಸದರಿ ಬಟ್ಟೆಗಳು ಪವನಕುಮಾರನಿಗೆ ಸೇರಿದ್ದು ಎಂದು ಹೇಳಿ ನಿಪಿ-23 ದಾಖಲೆಯ ಪೇಪರ ಮೇಲೆ ಬರೆದು ತನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆಂದು ನಂತರ ಅವುಗಳನ್ನು ಪ್ರತ್ಯೇಕವಾಗಿ ಸೀಲು ಮಾಡಿ ಅಮಾನತ್ತುಪಡಿಸಿಕೊಂಡಿರುತ್ತಾರೆಂದು ಸಾಕ್ಷ್ಯ ನುಡಿ ದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ ಸುಳ್ಳು**

**ಪ್ರಶ್ನೆಃ 10** ಪ್ರಾಸಾ-6 ಮುನಿಕಾಳಯ್ಯನವರ ಮಗ ವೆಂಕಟೇಶ್‌ಬಾಬು ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮಂಜುನಾಥ ಮತ್ತು ಆತನ ಸಹೋದರ ಮೃತ ಗಂಗಾಧರನು ಅಂಗಡಿ ಇಟ್ಟುಕೊಂಡು ನೀರಿನ ವ್ಯಾಪಾರ ಮಾಡುತ್ತಿದ್ದರೆಂದು, ಸತೀಶನ ಮಕ್ಕಳಾದ ಆರೋಪಿಗಳಾದ ಆನಂದ, ಲೋಕಿ ಇವರಿಬ್ಬರೂ ಕಬಾಬ ಅಂಗಡಿ ಇಟ್ಟುಕೊಂಡಿದ್ದರೆಂದು, ಮೃತ ಗಂಗಾಧರ, ಆನಂದ, ಲೋಕಿ ಇವರೆಲ್ಲರೂ ಸ್ನೇಹಿತರಿದ್ದರೆಂದು, ಕೊಂಗಾಡಿಯಪ್ಪ ಕಾಲೇಜು ರಸ್ತೆಯಲ್ಲಿರುವ 10 ನೇ ಕ್ರಾಸ್‌ನಲ್ಲಿರುವ ಕರೇನಹಳ್ಳಿಯ ಅವರ ಅಂಗಡಿಯ ಪಕ್ಕದಲ್ಲಿರುವ ರಸ್ತೆಯಲ್ಲಿ ದಿನಾಕಃ 07.01.2019 ರಂದು ಸೋಮವಾರ ರಾತ್ರಿ ಸುಮಾರು 08.00-08.30 ಗಂಟೆ ಸಮಯದಲ್ಲಿ ಮೃತ ಮತ್ತು ಆರೋಪಿತರು ಹಾಗೂ ಉಳಿದವರು ಒಟ್ಟು 6-7 ಜನ ಸ್ನೇಹಿತರು ನಿಂತಿದ್ದರೆಂದು, ಆ ಸಮಯದಲ್ಲಿ ತಾನು ಸದರಿ ರಸ್ತೆಯ ಮೂಲಕ ಅವರ ಅಂಗಡಿಗೆ ಹೋಗುತ್ತಿದ್ದರೆಂದು, ಸದರಿ ರಸ್ತೆಯು 10 ನೇ ಕ್ರಾಸನಲ್ಲಿರುತ್ತದೆಂದು, ಅವರು ಅಂಗಡಿಗೆ ಹೋದ 10-20 ನಿಮಿಷಗಳ ನಂತರ ಗಲಾಟೆಯಾಗುತ್ತಿದ್ದು ಜನಗಳು ಓಡುತ್ತಿದ್ದರೆಂದು, ಆಗ ಅವರೂ ಕೂಡ ಅಲ್ಲಿಗೆ

ಹೋಗಿರುತ್ತಾರೆಂದು, ನೀರು ಮಾರುತ್ತಿದ್ದ ಹುಡುಗನಿಗೆ ಬಲ ಮೊಣಕೈ ಹತ್ತಿರ ಹಾಗೂ ಬಲ ಕುತ್ತಿಗೆಯ ಬಲಭಾಗದಲ್ಲಿ ಹೊಡೆದಿದ್ದು ರಕ್ತ ಬರುತ್ತಿತ್ತೆಂದು, ಆಗ ಅವರ ಅಣ್ಣ ಮತ್ತು ಮನೆಯವರು ಅಲ್ಲಿಗೆ ಬಂದು ಅವರನ್ನು ಆಟೋದಲ್ಲಿ ಕರೆದುಕೊಂಡು ದೊಡ್ಡಬಳ್ಳಾಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ ಸುಳ್ಳು**

**ಪ್ರಶ್ನೆಃ 11.** ಪ್ರಾಸಾ-6 ರವರು ತಮ್ಮ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ನಂತರ ಗಂಗಾಧರ ಸತ್ತುಹೋಗಿರುತ್ತಾನೆಂದು ಗೊತ್ತಾಯಿತೆಂದು, ಅವರವರೇ ಕಿತ್ತಾಡಿಕೊಂಡು ಹೊಡೆದಾಡಿಕೊಂಡಿರುತ್ತಾರೆಂದು ಗೊತ್ತಾಯಿತೆಂದು, ನಂತರ ಹಳೆಯ ಜಿದ್ದು ಇಟ್ಟುಕೊಂಡು ಗಲಾಟೆ ಮಾಡಿಕೊಂಡು, ಪೋಲೀಸರಿಗೆ ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳಿಕೆ ನೀಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

**ಉತ್ತರಃ ಸುಳ್ಳು**

ಮೇಲೆ ಹೇಳಿದ ಪ್ರಶ್ನೆಗಳನ್ನು ಆರೋಪಿಗೆ ಓದಿ ಹೇಳಿ, ಅವರ ಉತ್ತರಗಳನ್ನು **ಬಹಿರಂಗ ನ್ಯಾಯಾಲಯದಲ್ಲಿ** ದಾಖಲು ಮಾಡಿಕೊಳ್ಳಲಾಯಿತು.

**ದಿಃ 03.05.2024.**
**ಸ್ಥಳಃ ದೊಡ್ಡಬಳ್ಳಾಪುರ**

**(ರಮೇಶ ದುರುಗಪ್ಪ ಏಕಬೋಟೆ)**
4ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದೊಡ್ಡಬಳ್ಳಾಪುರ.

ಆರೋಪಿ